**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಕ್ರಿ ಮಿಸ್ 411/2021**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿ ಡಬ್ಲ್ಯೂ.01**

**ದಿನಾಂಕಃ** 19.02.2025

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನಾನು ಬಿಕಾಂ ವಿದ್ಯಾಭ್ಯಾಸವನ್ನು ಕೊನೆಯ ವರ್ಷದಲ್ಲಿ ನಿಲ್ಲಿಸಿದ್ದೇನೆ. ನಾನು ಹರಿಹರದಲ್ಲಿ ಹುಟ್ಟಿ ಹರಿಹರದಲ್ಲಿ ಬೆಳೆದಿದ್ದೇನೆ ಎಂದರೆ ಸರಿ. ನನ್ನ ತಂದೆ ತಾಯಿಗೆ ನಾನು ಒಬ್ಬಳೇ ಹೆಣ್ಣು ಮಗಳು ಎಂದರೆ ಸರಿ. ಎದುರುದಾರರೂ ಸಹ ಅವರ ತಂದೆ ತಾಯಿಗೆ ಒಬ್ಬರೇ ಗಂಡು ಮಗ ಎಂದರೆ ಸರಿ. ಈ ಪ್ರಕರಣವನ್ನು ದಾಖಲಿಸಿದ ನಂತರ ನಾನು ದಾವಣಗೆರೆ ಕೌಟುಂಬಿಕ ನ್ಯಾಯಾಲಯದಲ್ಲಿ ಕ್ರಿ ಮಿಸ್ ನಂ. 142/2023 ರಡಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನಗೆ ಎದುರುದಾರರು ತಿಂಗಳಿಗೆ 4,000/- ರೂ ಮತ್ತು ನನ್ನ ಮಗಳಿಗೆ 2,000/- ರೂ ಹಣ ಕೊಡಬೇಕು ಎಂದು ಆದೇಶವಾಗಿದೆ ಎಂದರೆ ಸರಿ. ಸಾಕ್ಷಿಯು ಗುರುತಿಸಿದ ದಾಖಲೆಯನ್ನು ಮುಖಾಬಿಲೆಯಾಗಿ ನಿ ಆರ್.1 ಎಂದು ಗುರುತಿಸಲಾಯಿತು. ಈ ಪ್ರಕರಣವನ್ನು ದಾಖಲಿಸಲು ನಿಮ್ಮ ತಂದೆ ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಮತ್ತು ನನ್ನ ತಂದೆ ಮಾಹಿತಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ನಾನು ಎದುರುದಾರರ ವಿರುದ್ಧ ಐಪಿಸಿ ರಡಿ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿ. ಈ ಪ್ರಕರಣಕ್ಕೆ ಪೂರಕವಾಗುವಂತೆ ಎದುರುದಾರರ ವಿರುದ್ಧ ಪ್ರ ವ ವರದಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗಂಡ ಎದುರುದಾರರ ತಂದೆ ತಾಯಿಗೆ ವಯಸ್ಸಾಗಿದೆ ಎಂದರೆ ಸರಿ. ಎದುರುದಾರರು ಹಳ್ಳಿಯಲ್ಲಿ ಹುಟ್ಟಿ ಹಳ್ಳಿಯಲ್ಲಿ ಬೆಳೆದಿರುತ್ತಾರೆ ಎಂದರೆ ಸರಿ. ನಾನು ನಗರದಲ್ಲಿ ಹುಟ್ಟಿ ಬೆಳೆದದ್ದರಿಂದ ಹಾಗೂ ಎದುರುದಾರರು ಹಳ್ಳಿಯಲ್ಲಿ ಹುಟ್ಟಿ ಹಳ್ಳಿಯಲ್ಲಿ ಬೆಳೆದಿದ್ದರಿಂದ ನನ್ನ ಮತ್ತು ಅವರ ನಡುವೆ ಭಿನ್ನಾಭಿಪ್ರಾಯವಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಾರೆ. ನನ್ನ ತಂದೆಗೆ ಯಾವುದೇ ಆಸ್ತಿ ಇಲ್ಲ. ಮದುವೆ ಕಾಲಕ್ಕೂ ಆಸ್ತಿ ಇರಲಿಲ್ಲ ಎಂದರೆ ಸರಿ. ಎದುರುದಾರರು ಕೆ ಎಸ್ ಆರ್ ಟಿ ಸಿ ಡಿಪೋದಲ್ಲಿ ಸೆಕ್ಯುರಿಟಿ ಗಾರ್ಡ ಆಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅವರಿಗೆ ಬರುವ ಸಂಬಳದಲ್ಲಿ ತಾವು ಜೀವನ ಮಾಡಿ ತಮ್ಮ ತಂದೆ ತಾಯಿಯನ್ನು ಸಹ ಸಾಕಬೇಕು ಎಂದರೆ ಸರಿ. ನನ್ನ ಅತ್ತೆ ಮಾವಂದಿರಿಗೆ ಖಾಯಿಲೆಗಳು ಇವೆ ಎಂದರೆ ಸರಿ. ನಾನು ಮದುವೆಯಾಗಿ ಎದುರುದಾರರ ಮನೆಗೆ ಹೋದ ನಂತರ ನನ್ನ ಅತ್ತೆ ಮಾವಂದಿರನ್ನು ಚೆನ್ನಾಗಿ ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರೇ ಕಿರುಕುಳ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನಗೆ ನನ್ನ ಅತ್ತೆ ಅಡುಗೆ ಮಾಡಿಕೊಡುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರರ ತಾಯಿಗೆ ರಾತ್ರಿ ವೇಳೆ ಕಣ್ಣು ಕಾಣುವುದಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ಬೇರೆ ಮನೆ ಮಾಡಿ ಇರುವ ಬಗ್ಗೆ ಕೇಳಿದ್ದೆನು ಎಂದರೆ ಸರಿಯಲ್ಲ.

ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ